

Read India
An Imprint of Pratham Books



# ಜೇಡರ ಚಾಲ್ಯ

ಹರ್ಮಿಂದರ್ ಓಹರಿ



RGF Pratham
SERIES

Original Story (*English*) Spincy Spider by Herminder Ohri
© Rajiv Gandhi Foundation-Pratham Books, 2004

Second Kannada Edition: 2006

Illustrations: Herminder Ohri
Design: Moonis Ijlal
Kannada Translation: Dr. Divaspathy Hegde



ISBN: 81-8263-088-6

Registered Office:
PRATHAM BOOKS
9, Charles Campbell Road, Cox Town
Bangalore 560 005
✆ 080-25801462, 25801463



Regional Offices:
Mumbai ✆ 022-65162526
New Delhi ✆ 011-65684113

Typesetting by: Eshwari Graphics, Bangalore 560 050
Layout by: Pratham Books


Printed by:
Repro India Ltd.
Mumbai





Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc

# ಜೇಡರ ಜಾಲ



ಕಥೆ ಮತ್ತು ಚಿತ್ರಗಳು
**ಹರ್ಮೀಂದರ್ ಓಹರಿ**

ಕನ್ನಡ ಅನುವಾದ
**ಡಾ. ದಿವಸ್ಪತಿ ಹೆಗ್ಡೆ**

ದೂರ ಅರಣ್ಯವೊಂದರಲ್ಲಿ ಪರಿಮಳದ ಹೂಗಳ ಪೊದೆಯೊಂದರಲ್ಲಿ ಒಂದು ಚಿಕ್ಕ ಜೇಡ ಇತ್ತು. ಅದರ ಹೆಸರು 'ಚಾಲ್ಯ'. ಅದರ ಅಜ್ಜನ, ಅಜ್ಜನ, ಮುತ್ತಜ್ಜ ಬಹಳ ಪ್ರಸಿದ್ಧನಾಗಿದ್ದ. ಅವನ ಹೆಸರಿನಲ್ಲಿ ಹಾಡು ಕಟ್ಟಿ ಮಕ್ಕಳು ಹಾಡುತ್ತಿದ್ದರು. ಈ ವಿಷಯವನ್ನು ಒಮ್ಮೆ ಚಾಲ್ಯ ತನ್ನ ಸ್ನೇಹಿತರಾದ ಜೀರುಂಡೆ 'ಗರಿಕೆ' ಹಾಗೂ ಅವನ ತಮ್ಮ 'ಪುಟ್ಟ'ನಿಗೆ ಹೇಳಿದ.





ಗರಿಕೆ ಹಾಗೂ ಪುಟ್ಟರ ಮನೆಯಲ್ಲಿಯೂ
ಪ್ರಸಿದ್ಧರಾದವರು ಯಾರೂ ಇರಲಿಲ್ಲ.
ಈ ಬಗ್ಗೆ ಯೋಚಿಸಲು ಅವರಿಗೆ ವೇಳೆಯೂ ಇರಲಿಲ್ಲ.



ದಿನವಿಡೀ ಅವಕ್ಕೆ ಆಹಾರ ಹುಡುಕುವುದು,
ಮನೆಗೆಲಸಗಳಲ್ಲಿ ಸಹಾಯ ಮಾಡುವುದು,
ತಮ್ಮನ್ನು ರಕ್ಷಣೆ ಮಾಡಿ ಕೊಳ್ಳುವುದು ಎಂದು
ಕೈತುಂಬಾ ಕೆಲಸಗಳು ಇರುತ್ತಿದ್ದವು.





ಚಾಲ್ಯ ಜೇಡಕ್ಕೆ ಹಾಗಲ್ಲ. ಒಂದು ಬಲೆಯನ್ನು ನೇಯ್ದು ಅದರಲ್ಲಿ ನೊಣ ಸಿಕ್ಕಿ ಬೀಳುವುದನ್ನು ಕಾಯುತ್ತ ಕುಳಿತಿರುತ್ತಿದ್ದ. ಬೇರೆ ಕೆಲಸ ಇಲ್ಲವಾದ್ದರಿಂದ ತನ್ನ ಪ್ರಸಿದ್ಧ ಮುತ್ತಜ್ಜನ ಬಗ್ಗೆ ಆಗಾಗ ವಿಚಾರ ಮಾಡುತ್ತಿದ್ದ.

ಚಾಲ್ಯನಿಗೆ ತಾನೂ **ಪ್ರಸಿದ್ಧ**ನಾಗ ಬೇಕೆಂದು ಅನಿಸುತ್ತಿತ್ತು. ಆದರೆ ಪ್ರಸಿದ್ಧನಾಗುವುದು ಹೇಗೆ ಎನ್ನುವುದು ಅವನಿಗೆ ಗೊತ್ತಿರಲಿಲ್ಲ. 'ಪ್ರಸಿದ್ಧ' ಎಂದರೆ ಏನು ಅನ್ನುವುದೂ ಅವನಿಗೆ ಗೊತ್ತಿರಲಿಲ್ಲ.



ಹೀಗಿರುವಾಗ ಒಂದು ದಿನ ಅವನು ''ಪ್ರಸಿದ್ಧ''ವನ್ನು ಹುಡುಕುತ್ತ ಬಲೆಗಳನ್ನು ನೇಯುತ್ತ ಕೊಂಬೆಯಿಂದ ಕೊಂಬೆಗೆ ಹರಿದಾಡಿದ. ಹೀಗೆ ಹತ್ತು ಕಡೆ ಹುಡುಕಿದರೂ ಅವನಿಗೆ ''ಪ್ರಸಿದ್ಧ'' ಸಿಗಲೇ ಇಲ್ಲ!




ಪ್ರಸಿದ್ಧ ಆಗುವುದು ಹೇಗೆ ಎಂದು ಅವನು ತನ್ನ ಸ್ನೇಹಿತರನ್ನು ಕೇಳಿದ. ಆದರೆ ಅವರಿಗೂ ಅದು ಗೊತ್ತಿರಲಿಲ್ಲ.



ಒಂದು ಮುಂಜಾನೆ ಗರಿಕೆ ಹಾಗೂ ಪುಟ್ಟ ಜೀರುಂಡೆಗಳು ಚಾಲ್ಯನ ಭೇಟಿಗೆ ಬಂದರು. ಚಾಲ್ಯನಿಗೆ ಉಡುಗೊರೆಯಾಗಿ ಸತ್ತ ನೊಣವೊಂದನ್ನು ಅವನ ಬಲೆಗೆ ಸಿಕ್ಕಿಸಿದರು. ಇದರಿಂದ ಚಾಲ್ಯನಿಗೆ ಸಂತೋಷವಾಗಿ ತನ್ನ ಗೆಳೆಯರನ್ನು ಸಕಲ ರೀತಿಯಿಂದ ಸತ್ಕರಿಸಿದನು.

ಆಗ ಗರಿಕೆ ಹೇಳಿದ, ''ಚಾಲ್ಯ, ನಿನಗೆ ನಾನೊಂದು ವಿಶೇಷ ಸುದ್ದಿ ತಂದಿದ್ದೇನೆ. ಪ್ರಸಿದ್ಧಿ ಆಗುವುದು ಹೇಗೆ ಎಂದು ನನಗೊಂದು ದಾರಿ ಹೊಳೆದಿದೆ''. ಈ ಮಾತು ಕೇಳಿ ಚಾಲ್ಯನಿಗೆ ಆದ ಸಂತೋಷದ ಭರದಲ್ಲಿ ಆತ ತಾನು ತಿನ್ನುತ್ತಿದ್ದ ನೊಣವನ್ನು ನೆಲಕ್ಕೆ ಬೀಳಿಸುವವನಿದ್ದ.




''ಹೇಗೆ? ಅದು ಎಲ್ಲಿದೆ?'' ಚಾಲ್ಯ ಕೇಳಿದ. ಗರಿಕೆ ಹೇಳಿದ.''ಹಾಂ, ನಾನು, ನನ್ನ ತಮ್ಮ ಪುಟ್ಟ ಇಬ್ಬರಿಗೂ ಒಬ್ಬ ಸ್ನೇಹಿತ ಇದ್ದಾನೆ. ಅವನ ಹೆಸರು ರಾಮಗಿಣಿ. ನಾವು ತೀರಾ ಆತ್ಮೀಯರಲ್ಲ, ಆದರೂ ಅವನು ಆಗಾಗ ಮರದ ಮೇಲಿಂದ ನಮಗಾಗಿ ಹಣ್ಣಿನ ಚೂರುಗಳನ್ನು ಬೀಳಿಸುತ್ತಿರುತ್ತಾನೆ. ಹಾಗೆ ನಾವು ಸ್ನೇಹಿತರು''.



ರಾಮಗಿಣಿಯ ಸ್ನೇಹದ ಕಥೆ ಹೇಳುತ್ತ ಗರಿಕೆ ಮುಖ್ಯ ವಿಷಯವನ್ನೇ ಮರೆತಿದ್ದ. ಆದರೆ ಚಾಲ್ಯನಿಗೆ ಆತುರ. ''ರಾಮಗಿಣಿ ಪ್ರಸಿದ್ಧ ಆಗುವ ಬಗ್ಗೆ ಏನು ಹೇಳಿದ? ಅದನ್ನು ಮೊದಲು ಹೇಳು'' ಎಂದು ಒತ್ತಾಯಿಸಿದ. ಆಗ ಗರಿಕೆ ವಿಷಯ ಮುಂದುವರಿಸಿದ. ''ರಾಮಗಿಣಿ ಮನುಷ್ಯರ ಮಧ್ಯೆ ವಾಸಿಸುತ್ತಾನೆ. ಮನುಷ್ಯರು ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಮಾತಾಡುತ್ತಾರೆ. ಉಳಿದವರು ಮಾಡದ ಕೆಲಸ ಮಾಡಿದರೆ ನಿನ್ನ ಹೆಸರು ಎಲ್ಲರಿಗೂ ಪರಿಚಯ ವಾಗುತ್ತದೆ. ಆಗ ನೀನು 'ಪ್ರಸಿದ್ಧ' ಆಗುತ್ತೀಯೆ''.





ಈ ವಿವರಣೆಯಿಂದ ಚಾಲ್ಯನಿಗೆ ಹೆಚ್ಚಿನದೇನೂ ತಿಳಿದಂತೆ ಆಗಲಿಲ್ಲ. ಗರಿಕೆ ಅವನನ್ನು ಸಮಾಧಾನ ಪಡಿಸುತ್ತ, ''ನೀನು ಈಗಾಗಲೇ ಪ್ರಸಿದ್ಧನಾಗಿದ್ದೀಯೆ. ನನಗೆ, ನನ್ನ ತಮ್ಮನಿಗೆ ನಿನ್ನ ಹೆಸರು ಗೊತ್ತು; ರಾಮಗಿಣಿಗೆ ನಿನ್ನ ಹೆಸರು ಗೊತ್ತು, ಈ ಪೊದೆಯಲ್ಲಿರುವ ಎಲ್ಲಾ ಜೇಡಗಳಿಗೂ ನಿನ್ನ ಹೆಸರು ಗೊತ್ತು''.

ಆದರೆ ಚಾಲ್ಯನಿಗೆ ಇದರಿಂದ ಸಮಾಧಾನ ಆಗಲಿಲ್ಲ. ''ಇಲ್ಲ'' ಎನ್ನುವಂತೆ ಅವನು ತಲೆ ಅಲ್ಲಾಡಿಸಿದ. ಜೊತೆಗೆ ಅವನ ಎಂಟು ಕಾಲುಗಳೂ ಅಲ್ಲಾಡಿದವು.





''ಆದರೆ, ಈ ಚಾಲ್ಯನ ಕುರಿತು ಯಾರೂ ಮಕ್ಕಳ ಹಾಡು ಬರೆದಿಲ್ಲ'' ಚಾಲ್ಯ ತನ್ನ ದುಃಖ ತೋಡಿಕೊಂಡ. ಗರಿಕೆ ಮತ್ತು ಪುಟ್ಟ ಹೊರಟು ಹೋದರು. ತಮ್ಮ ಸ್ನೇಹಿತ 'ಪ್ರಸಿದ್ಧ' ಆಗುವುದಕ್ಕೆ ಸಹಾಯ ಮಾಡಲು ತಮ್ಮಿಂದ ಆಗಲಿಲ್ಲ ಎಂದು ಅವರಿಗೆ ದುಃಖವಾಯಿತು.

ಚಾಲ್ಯ ಯೋಚಿಸ ತೊಡಗಿದ. ಉಳಿದ ಯಾವ ಜೇಡವೂ ಮಾಡದಂತಹ ಕೆಲಸ ತಾನೇನು ಮಾಡಬಹುದು?

ಒಂದು ಸುಂದರ ಬಲೆ ನೇಯ್ದ. ಆದರೆ ಎಲ್ಲ ಜೇಡಗಳೂ ಅಂತಹ ಬಲೆ ನೇಯುತ್ತವೆ. ಅವನಿಗೆ ಸಮಾಧಾನ ಆಗಲಿಲ್ಲ. ಆತ ನೊಣಗಳನ್ನು ಹಿಡಿದ. ಉಳಿದ ಜೇಡಗಳೂ ನೊಣ ಹಿಡಿಯುತ್ತವೆ. ಅತಿ ವೇಗದಿಂದ ಆತ ಮೇಲೇರುವುದು, ಕೆಳಗಿಳಿಯುವುದು ಮಾಡಿದ. ಆದರೆ ಉಳಿದ ಜೇಡಗಳೂ ಹಾಗೇ ಮಾಡಬಲ್ಲವು. ಬೇರೆ ಜೇಡಗಳು ಮಾಡಲಾಗದ ಏನನ್ನೂ ಅವನಿಗೆ ಮಾಡಲು ಸಾಧ್ಯವಾಗಲಿಲ್ಲ.







ಹೀಗೇ ಹಲವು ದಿನಗಳು ಕಳೆದವು. ಚಾಲ್ಯನಿಗೆ ಪ್ರಸಿದ್ಧಿ ಸಿಗಲಿಲ್ಲ. ಒಂದು ದಿನ ಅವನು ತನ್ನ ಬಲೆಯ ಮಧ್ಯದಲ್ಲಿ ಕಾಯುತ್ತ ಕುಳಿತಿದ್ದಾಗ ಗರಿಕೆ ಜೀರುಂಡೆ ಜೋರಾಗಿ ಕೂಗಿ ಕೊಳ್ಳುವುದನ್ನು ಕೇಳಿದ.

''ಚಾಲ್ಯ, ಸಹಾಯ ಮಾಡು. ಪುಟ್ಟನಿಗೆ ಪೆಟ್ಟಾಗಿದೆ. ಸಹಾಯ! ಸಹಾಯ!'' ಎಂದು ಗರಿಕೆ ಕೂಗುವುದನ್ನು ಕೇಳಿ ಚಾಲ್ಯ ಅತ್ತ ಓಡಿದ.

ಪುಟ್ಟನ ಮೈಮೇಲೆ ಒಂದು ದೊಡ್ಡ ಕಲ್ಲು ಬಿದ್ದಿತ್ತು. ಅದರ ಅಡಿಯಿಂದ ಹೇಗೋ ಕಷ್ಟಪಟ್ಟು ಪುಟ್ಟ ಹೊರ ಬಂದಿದ್ದ. ಆದರೆ ಹೊರ ಬರುವ ಪ್ರಯತ್ನದಲ್ಲಿ ಅವನ ಒಂದು ಕಾಲು ಮುರಿದಿತ್ತು ಹಾಗೂ ಅವನ ಪಕ್ಕೆಗೆ ಏಟು ಬಿದ್ದಿತ್ತು. ನಿಶ್ಶಕ್ತನಾಗಿ ಪುಟ್ಟ ಮಲಗಿದ್ದ. ಗರಿಕೆ ಮತ್ತು ಇತರ ಚಿಟ್ಟೆಗಳು ಏನು ಮಾಡಲೂ ತಿಳಿಯದೆ ಅವನ ಸುತ್ತ ನೆರೆದಿದ್ದವು. ಏನಾಗಿದೆ ಎನ್ನುವುದನ್ನು ತಿಳಿದ ಚಾಲ್ಯ ಜೇಡ ಗರಿಕೆಯನ್ನು ಕರೆದು ಒಂದು ಚಿಕ್ಕ ಎಲೆಯನ್ನು ತರಲು ಹೇಳಿದ.



ಗರಿಕೆ ಎಲೆಯನ್ನು ತಂದ. ಆದರೆ ಅಷ್ಟರಲ್ಲಿ ಕತ್ತಲಾಗುತ್ತ ಬಂದಿತ್ತು. ಜೇಡಕ್ಕೆ ಕತ್ತಲಲ್ಲಿ ಸರಿಯಾಗಿ ಕಣ್ಣು ಕಾಣುವುದಿಲ್ಲ. ಆದರಿಂದ ಗರಿಕೆ ತನ್ನ ಸಂಬಂಧಿಗಳಾದ ಮಿಂಚು ಹುಳಗಳನ್ನು ಕರೆದು ಬೆಳಕು ಬೀರಲು ಹೇಳಿದ. ಮಿಂಚುಹುಳಗಳು ಒಂದು ಥರದ ಜೀರುಂಡೆಗಳೇ ಆಗಿವೆ. ಅವು ಬಂದು ಮಿಂಚುತ್ತ ಬೆಳಕು ಬೀರಿದವು.


ಎಲೆಯ ಮಧ್ಯದ ಗಟ್ಟಿ ನಾರನ್ನು ಮುರಿದ ಕಾಲಿನ ಮೇಲೆ ಇಟ್ಟು ಎರಡನ್ನೂ ಸೇರಿಸಿ ಸುತ್ತಲೂ ಚಾಲ್ಯ ಎಲೆಯನ್ನು ಸುತ್ತಿದ. ನಾರು ಮತ್ತು ಎಲೆ ಕಾಲಿಗೆ ಬಿಗಿಯಾಗಿ ಹೊಂದಿ ಕೊಳ್ಳುವಂತೆ ತಾನು ಬಲೆ ನೇಯುವ ಎಳೆಯಿಂದ ಬ್ಯಾಂಡೇಜಿನಂತೆ ಸುತ್ತಿದ. ಹಾಗೆಯೇ ಎಲೆಯ ಚೂರೊಂದನ್ನು ತೆಗೆದುಕೊಂಡು ಪುಟ್ಟನ ಪೆಟ್ಟು ಬಿದ್ದ ಪಕ್ಕೆಯ ಭಾಗದ ಮೇಲೆ ಇಟ್ಟು, ಆದರ ಮೇಲೂ ತನ್ನ ಬಲೆಯ ಹಾಸನ್ನು ನೇಯ್ದ.



ಪುಟ್ಟನಿಗೆ ಇದರಿಂದ ಹೆಚ್ಚು ಆರಾಮ ಎನಿಸಿತು. ಉಳಿದ ಜೀರುಂಡೆಗಳು ಸೇರಿ ಪುಟ್ಟನನ್ನು ಅವನ ಮನೆಯೊಳಗೆ ತಂದು ಬಿಟ್ಟವು.

ಚಾಲ್ಯ ಆಯಾಸದಿಂದ ಕುಳಿತ. ಆದರೆ ಅವನಿಗೆ ಸಂತೋಷವಾಗಿತ್ತು. ತನ್ನ ಸ್ನೇಹಿತನ ಜೀವ ಉಳಿಸಲು ಅವನು ಸಹಾಯ ಮಾಡಿದ್ದ. ಆಗಲೇ ರಾತ್ರಿಯಾಗಿದ್ದರಿಂದ ಮನೆಗೆ ತೆರಳಿ ವಿಶ್ರಾಂತಿ ಪಡೆಯಲು ಹೊರಟ.

ಮನೆಗೆ ಹೋಗುತ್ತಿದ್ದಂತೆ ಚಿಕ್ಕ, ದೊಡ್ಡ ಹಲವು ಜೀರುಂಡೆಗಳು ಅವನನ್ನು ಹಿಂಬಾಲಿಸಿದವು. ಮಿಂಚುಹುಳಗಳು ಅವನ ತಲೆಯ ಮೇಲಿಂದ ಬೆಳಕು ಬೀರುತ್ತಿದ್ದವು.



ನಕ್ಷತ್ರಗಳಂತೆ ಹೊಳೆಯುತ್ತ ಅವು ರಾಮಗಿಣಿ ಬರೆದ ಮಕ್ಕಳ ಗೀತೆಯೊಂದನ್ನು ಹಾಡುತ್ತಿದ್ದವು.



ಇತರ ಜೇಡಗಳಂತಲ್ಲ ನಮ್ಮ ಚಾಲ್ಯ
ಅವನಿಗೆ ದಯೆ ಹೆಚ್ಚು
ಕಾಲಿಗೆ ಪಟ್ಟಿ ಹಾಕಬಲ್ಲ
ಪೆಟ್ಟಿಗೆ ಹಾಸು ನೇಯಬಲ್ಲ
ಅವನಿಗಾರೂ ಸಾಟಿಯಿಲ್ಲ

ಕೆಲವೇ ದಿನಗಳಲ್ಲಿ ಅರಣ್ಯದ ತುಂಬ ಅವನ ಹೆಸರು ಹಬ್ಬಿತ್ತು.

ಆ ಅರಣ್ಯಕ್ಕೆ ಹೋದರೆ ನೀವೂ ಈ ಹಾಡು ಕೇಳಬಹುದು. ಸಂಜೆಯ ಹೊತ್ತು ಮಿಂಚುಹುಳಗಳು ಚಾಲ್ಯನ ಪೊದೆಯ ಸುತ್ತ ಬೆಳಕು ಚೆಲ್ಲುತ್ತಿರುವಾಗ ಈ ಹಾಡು ಕೇಳಿ ಬರುತ್ತದೆ.

ಆಗ ಚಾಲ್ಯನಿಗೆ ಏನನಿಸುತ್ತದೆ ಗೊತ್ತೇ? ಅವನಿಗೆ ಸಂತೋಷವಾಗುತ್ತದೆ. ಆದರೆ, '' ಸಹಾಯ ಬೇಕಾದಾಗ ಸ್ನೇಹಿತರು ನನ್ನನ್ನು ನೆನೆಸಿಕೊಳ್ಳುತ್ತಾರೆ. ಅದರಿಂದ ನನಗೆ ಹೆಚ್ಚು ಸಂತೋಷವಾಗುತ್ತದೆ'' ಎನ್ನುತ್ತಾನೆ ಚಾಲ್ಯ.



ತನ್ನ ಹೆಸರು ಪ್ರಸಿದ್ಧವಾಗಬೇಕೆಂದು ಜೇಡರ ಚಾಲ್ಯ ಏನೇನೆಲ್ಲ ಮಾಡಿದ. ಪ್ರಸಿದ್ಧಿಯ ಬೆನ್ನು ಹತ್ತಿದ ಈತ ಎಲ್ಲರೂ 'ಶಹಬ್ಬಾಸ್' ಎನ್ನುವಂತಹ ಯಾವ ಕೆಲಸ ಮಾಡಿದ? ಜೇಡರ ಚಾಲ್ಯ ಹಾಗೂ ಅವನ ಸ್ನೇಹಿತರ ರೋಚಕ ಕಥೆಯನ್ನು ಓದಿರಿ ''ಜೇಡರ ಚಾಲ್ಯ''ದಲ್ಲಿ.

ಈ ಮಾಲಿಕೆಯ ಇತರ ಪುಸ್ತಕಗಳು :

**ಮೊಸಳೆ ಮತ್ತು ಪಾತರಗಿತ್ತಿ • ಒಂದು ದೊಡ್ಡ ವಿಪತ್ತು**

**ನಮ್ಮ ಅದ್ಭುತ ಜಗತ್ತು • ನೌಕಾಯಾನ**

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ
**www.prathambooks.org**

ಪ್ರಥಮ್ ಬುಕ್ ಭಾರತೀಯ ಭಾಷೆಗಳಲ್ಲಿ ಉತ್ತಮ ದರ್ಜೆಯ ಮತ್ತು ಕಡಿಮೆ ಬೆಲೆಯ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು.

ISBN 81-8263-088-6

Jedara Chalya (Kannada)
Rs. 20.00